# ‘ನಾನು ಹೆಣ್ಣು... ಪಾರ್ಸೆಲ್ ಅಲ್ಲ’

ಆಲಿಯಾ ಭಟ್ ಕೋಪಗೊಂಡು, ‘ತಾನೊಂದು ಪಾರ್ಸೆಲ್ ಅಲ್ಲ’ ಎಂದು ಹೇಳಿದ್ದು ಕೆಲವು ಮಾಧ್ಯಮಕ್ಕೆ. ರಣಬೀರ್ ಕಪೂರ್ ಹಾಗೂ ಆಲಿಯಾ ಮದುವೆ ಗೊತ್ತಾದಾಗಿನಿಂದ ಕೆಲವು ಸುದ್ದಿಮಿತ್ರರಿಗೆ ಅದು ದೊಡ್ಡ ಇವೆಂಟ್ ತರಹವೇ ಆಗಿತ್ತು. ಪುಂಖಾನುಪುಂಖವಾಗಿ ಸುದ್ದಿ ಬಿತ್ತರಗೊಂಡವು. ಈಗ ಆಲಿಯಾ ಗರ್ಭಿಣಿ ಎನ್ನುವುದು ಶುಭಸುದ್ದಿ. ಇಷ್ಟನ್ನೇ ಮಾಧ್ಯಮ ವರದಿ ಮಾಡಿದ್ದರೆ ಆಲಿಯಾ ಬೇಸರಗೊಳ್ಳುತ್ತಿರಲಿಲ್ಲ. ವರದಿಗಳಲ್ಲಿ ಅವರಿಗೆ ಕೆಲವು ಪುರುಷಪ್ರಧಾನ ಮನಸ್ಸುಗಳು ಗೋಚರಿಸಿವೆ. ಅದನ್ನು ನೋಡಿದ್ದೇ ಅವರು ಸಾಮಾಜಿಕ ಜಾಲತಾಣದಲ್ಲಿ ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸಲು ನಿರ್ಧರಿಸಿದರು.

‘ನಾನು ಹೆಣ್ಣು... ಪಾರ್ಸೆಲ್ ಅಲ್ಲ. ರಣಬೀರ್ ನನ್ನನ್ನು ಇಂಗ್ಲೆಂಡ್‌ಗೆ ಬಂದು ಕರೆದುಕೊಂಡು ಹೋಗುವ ಯಾವ ಕಾರ್ಯಕ್ರಮವೂ ಇಲ್ಲ. ಒಪ್ಪಿಕೊಂಡ ಕೆಲಸಗಳನ್ನೆಲ್ಲ ಮುಗಿಸಿದ ಮೇಲೆಯೇ ನಾನು ಬದುಕಿನ ಖಾಸಗಿ ವಿಷಯಗಳ ಬಗೆಗೆ ತೀರ್ಮಾನ ಕೈಗೊಂಡದ್ದು’ ಎಂಬರ್ಥದ ಪೋಸ್ಟ್ ಅನ್ನು ಅವರು ಟ್ವೀಟ್ ಮಾಡಿದರು.

ಆಲಿಯಾ ಇಂಗ್ಲೆಂಡ್‌ನಲ್ಲಿ ಇದ್ದು, ಅವರ ತಾಯ್ತನದ ಖುಷಿ ಕೇಳಿ ಖುದ್ದು ರಣಬೀರ್ ಅಲ್ಲಿಗೆ ಹೋಗಿ ಪತ್ನಿಯನ್ನು ಕರೆತರಲಿದ್ದಾರೆ ಎಂದು ಕೆಲವರು ಬರೆದರು. ಇನ್ನು ಕೆಲವರು, ಆಲಿಯಾ ಈಗಾಗಲೇ ಒಪ್ಪಿಕೊಂಡಿರುವ ಚಿತ್ರಗಳ ಗತಿ ಏನು ಎಂದು ಚಿಂತಾಕ್ರಾಂತ ದನಿಯನ್ನು ವ್ಯಕ್ತಪಡಿಸಿದರು. ಇವೆರಡಕ್ಕೂ ಆಲಿಯಾ ಖಾರವಾಗಿ ಪ್ರತಿಕ್ರಿಯಿಸಿದರು.

‘ಬ್ರಹ್ಮಾಸ್ತ್ರ’ ಚಿತ್ರದ ಟ್ರೈಲರ್ ನೋಡಿ ಒಂದಿಷ್ಟು ಜನ ನೆಗೆಟಿವ್ ಆಗಿ ಪ್ರತಿಕ್ರಿಯಿಸಿದ್ದರು. ಈಗ ವೈಯಕ್ತಿಕ ಬದುಕಿನ ಕುರಿತು ಊಹಾಪೋಹಗಳನ್ನು ಹಬ್ಬಿಸುವುದನ್ನು ಆಲಿಯಾ ಸಹಿಸುತ್ತಿಲ್ಲ.

‘ಪ್ರತಿ ವೃತ್ತಿಪರರಿಗೂ ತಮ್ಮ ಜವಾಬ್ದಾರಿಯ ಅರಿವಿರುತ್ತದೆ. ಹೆಣ್ಣಾಗಲಿ, ಗಂಡಾಗಲಿ ಮಾಡುವ ಕೆಲಸದಲ್ಲಿ ಒಂದೇ ಎಂಬ ಭಾವನೆ ನಮ್ಮಲ್ಲಿ ಇರಬೇಕು. ಕೆಲವರು ಹೆಣ್ಣು ಎಂದಾಕ್ಷಣ ಬಾಯಿಗೆ ಬಂದಹಾಗೆಲ್ಲ ಕಮೆಂಟ್ ಮಾಡುತ್ತಾರೆ. ರಣಬೀರ್ ನನ್ನನ್ನು ಒಂದು ವಸ್ತು ಎಂದು ಭಾವಿಸಿ, ಪಾರ್ಸೆಲ್ ಮಾಡಿಕೊಂಡು ಬರಲು ಆಗುತ್ತದಾ’ ಎಂಬ ಆಲಿಯಾ ಪ್ರಶ್ನೆ ಕೆಲವರಿಗೆ ಚುರುಕು ಮುಟ್ಟಿಸಿರುವುದಂತೂ ನಿಜ. ■





# ಮಾದಕವ್ಯಸನ

## ಸುನೀಲ್ ಮನದ ಮಾತು

■ ವಿಶಾಖ ಎನ್.

ಮಾದಕವಸ್ತು ವ್ಯಸನ ಮುಕ್ತ ದಿನಾಚರಣೆ ಈಚೆಗೆ ನಡೆಯಿತು. ಆಗ ಸಮಾರಂಭವೊಂದಕ್ಕೆ ಅತಿಥಿಯಾಗಿ ಸುನೀಲ್ ಶೆಟ್ಟಿ ಹೋಗಿದ್ದರು. ಸಭಿಕರಿಗೆ ಪ್ರಶ್ನೆ ಕೇಳುವ ಅವಕಾಶ ಇತ್ತು. ಒಬ್ಬರು, ‘ಸಿನಿಮಾ ಕುಟುಂಬಗಳ ಮಕ್ಕಳೇಕೆ ಮಾದಕದ್ರವ್ಯ ವ್ಯಸನಿಗಳಾಗುವುದು ಹೆಚ್ಚಾಗುತ್ತಿದೆ’ ಎಂದು ನೇರವಾಗಿ ಕೇಳಿದರು.

ತಮ್ಮ ಸಣ್ಣ ಕಣ್ಣುಗಳನ್ನು ಪಿಳಿಪಿಳಿಸುತ್ತಾ ಸುನೀಲ್ ಉತ್ತರ ಕೊಟ್ಟಿದ್ದು ಹೀಗೆ: ‘ನಾನು ಮೂರು ದಶಕಗಳ ಹಿಂದೆಯೇ ಸಿನಿಮಾ ನಟನಾದೆ. ಮುನ್ನೂರಕ್ಕೂ ಹೆಚ್ಚು ಸ್ನೇಹಿತರು ನನ್ನ ಬಳಗದಲ್ಲಿದ್ದಾರೆ. ಅವರ್ಯಾರೂ ಮಾದಕದ್ರವ್ಯ ವ್ಯಸನಿಗಳಲ್ಲ. ಏನೇ ಆದರೂ ಮಕ್ಕಳನ್ನು ಮಕ್ಕಳಾಗಿಯೇ ನೋಡಬೇಕು. ತಪ್ಪು ಮಾಡಿದಾಗ ತಿದ್ದಬೇಕು. ಕೆಲವು ಪರಿಸ್ಥಿತಿಯಲ್ಲಿ ಮಕ್ಕಳು ಹಾದಿ ತಪ್ಪುವುದು ಸಹಜ. ಒಳಿತು, ಕೆಡುಕಿನ ಅರಿವಿಲ್ಲದೆಯೂ ಹೀಗೆ ಆಗಬಹುದು. ಹಾಗೆಂದು ಅವರಿಗೆ ಬದುಕುವ ಹಕ್ಕೇ ಇಲ್ಲ ಎನ್ನುವಂತೆ ಕಲ್ಲೆಸೆಯಬಾರದು. ಕೆಟ್ಟ ವ್ಯಸನಗಳಿಗೆ ಸಿನಿಮಾ ಕುಟುಂಬದವರಷ್ಟೆ ಬೀಳುವುದಿಲ್ಲ ಎನ್ನುವ ವಿವೇಕವೂ ನಮಗಿರಬೇಕು. ತಾರಾ ಕುಟುಂಬಗಳ ಮಕ್ಕಳು ಸಿಕ್ಕಿಹಾಕಿಕೊಂಡಾಗ ಹೆಚ್ಚು ಸದ್ದಾಗುತ್ತದೆ.’

ಶಾರುಖ್ ಖಾನ್ ಪುತ್ರ ಆರ್ಯನ್ ಖಾನ್ ಡ್ರಗ್ಸ್ ಪ್ರಕರಣದಲ್ಲಿ ಪೊಲೀಸರಿಂದ ಹಿಂದೆ ವಿಚಾರಣೆಗೆ ಒಳಗಾದರು. ಇತ್ತೀಚೆಗೆ ಬೆಂಗಳೂರಿನ ಪಾರ್ಟಿಯಲ್ಲಿ ಡಿಜೆ ಆಗಿದ್ದ, ಸಿದ್ಧಾರ್ಥ್ ಕಪೂರ್ ಕೂಡ ಮಾದಕದ್ರವ್ಯ ಸೇವಿಸಿದ್ದರೆನ್ನುವ ಕಾರಣಕ್ಕೆ ಪೊಲೀಸರ ಕಣ್ಣಿಗೆ ಬಿದ್ದಿದ್ದರು. ನಟ ಶಕ್ತಿಕಪೂರ್ ಪುತ್ರ ಸಿದ್ಧಾರ್ಥ್. ಹೀಗಾಗಿ ಈ ಪ್ರಕರಣವೂ ಅನೇಕರ ಹುಬ್ಬೇರಿಸಿತ್ತು. ■